# ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ; ಒಂದು ಚಿಂತನ

(ಸೀಫಾ ಮಾರ್ಗದರ್ಶನದಲ್ಲಿ)

**ಶಾಸಕರ ಭವನ-2 ಸಭಾಂಗಣ, ಬೆಂಗಳೂರು**

**ದಿನಾಂಕ 06.11.2011 ರವಿವಾರ ಮುಂಜಾನೆ 10.30 ಗಂಟೆಗೆ**

---

**ಇಂದು "ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ; ಒಂದು ಚಿಂತನ" ಎಂಬ ವಿಷಯದ ಮೇಲೆ ರೈತರ, ರೈತ ಸಂಘಟನೆಗಳ, ರೈತ ಮುಖಂಡರ ಹಾಗೂ ರೈತಪರ ಕಳಕಳಿ ಹೊಂದಿದ ಶಾಸಕರ ಮತ್ತು ಸಂಸದರ ಸಭೆಯಲ್ಲಿ ಈ ಕೆಳಕಂಡಂತೆ ಒಮ್ಮತದ ನಿರ್ಣಯಗಳನ್ನು ಅಂಗೀಕರಿಸಲಾಯಿತು.**

## ನಿರ್ಣಯಗಳು

1. ಕೃಷಿ ಉತ್ಪನ್ನಕ್ಕೆ ನಿಗದಿ ಮಾಡಬೇಕಾಗಿರುವ ಕನಿಷ್ಠ ಬೆಂಬಲ ಬೆಲೆಯ ಕುರಿತು ಡಾ. ಸ್ವಾಮಿನಾಥನ್ ಆಯೋಗ ಸಲ್ಲಿಸಿರುವ ವರದಿಯನ್ನು ಚರ್ಚಿಸಿ ಅಂಗೀಕರಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ರಾಜ್ಯದಿಂದ ರೈತಪರ ನಿಲುವಿನ ಶಾಸಕರು, ಸಂಸತ್ ಸದಸ್ಯರು ಹಾಗೂ ನಾಯಕರುಗಳ ನಿಯೋಗ ಪ್ರಧಾನಮಂತ್ರಿ, ಸಭಾಧ್ಯಕ್ಷರು, ಸಂಸದೀಯ ವ್ಯವಹಾರಗಳ ಸಚಿವರು ಮತ್ತು ವಿರೋಧ ಪಕ್ಷದ ನಾಯಕರುಗಳನ್ನು ಭೆಟ್ಟಿಯಾಗಿ ಒತ್ತಾಯಿಸಲು ಸಭೆಯು ನಿರ್ಣಯಿಸಿತು.

2. ಕರ್ನಾಟಕ ವಿಧಾನ ಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ ಸದಸ್ಯರೆಲ್ಲರೂ ತಮ್ಮ ಸದನದಲ್ಲಿ ಡಾ.ಸ್ವಾಮಿನಾಥನ್ ಅವರು ಸಲ್ಲಿಸಿದ ರಾಷ್ಟ್ರೀಯ ಕೃಷಿ ಆಯೋಗದ ವರದಿಯನ್ನು ಕೃಷಿ ಉತ್ಪನ್ನಗಳ ಬೆಲೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಕೂಡಲೇ ಒಪ್ಪಿ ಅನುಷ್ಠಾನಗೊಳಿಸುವಂತೆ ಒತ್ತಾಯಿಸುವ ನಿರ್ಣಯ ತೆಗೆದುಕೊಳ್ಳಬೇಕೆಂದು ಈ ಸಭೆಯು ವಿನಂತಿಸುತ್ತದೆ.

3. ಇಂತಹುದೇ ಪ್ರಕ್ರಿಯೆಯನ್ನು ರಾಷ್ಟ್ರದ ಸಂಸತ್ ಸದಸ್ಯರು ತಮ್ಮ ಸದನಗಳಲ್ಲಿ ಡಾ.ಸ್ವಾಮಿನಾಥನ್ ಅವರು ಸಲ್ಲಿಸಿದ ರಾಷ್ಟ್ರೀಯ ಕೃಷಿ ಆಯೋಗದ ವರದಿಯನ್ನು ಕೇಂದ್ರ ಸರ್ಕಾರ ಕೂಡಲೇ ಒಪ್ಪಿ ಅನುಷ್ಠಾನಗೊಳಿಸುವಂತೆ ನಿರ್ಣಯಿಸಿ ರೈತರ ಹಿತ ರಕ್ಷಣೆ ಮಾಡಬೇಕೆಂದು ನಿರ್ಣಯಿಸಲಾಯಿತು.

4. ಕೃಷಿ ಹುಟ್ಟುವಳಿಗಳ ಆಯಾತ ನಿರ್ಯಾತಕ್ಕೆ ಸಂಬಂಧಿಸಿದ ನಿರ್ಣಯಗಳನ್ನು ನಮ್ಮ ರೈತರ ಹಿತರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ಮಾಡಬೇಕೆಂದು ಈ ಸಭೆ ಒತ್ತಾಯಿಸುತ್ತದೆ.

5. ರಾಜ್ಯ ಸರ್ಕಾರ ರೈತರ ಹಿತ ರಕ್ಷಣೆಗಾಗಿ 2007 ರಲ್ಲಿಯೇ ಎ.ಪಿ.ಎಂ.ಸಿ. ಕಾನೂನಿಗೆ ತಂದಿರುವ ತಿದ್ದುಪಡಿಗಳನ್ನು ಈವರೆಗೆ ಅನುಷ್ಠಾನಗೊಳಿಸದೇ ಇರುವುದು ವಿಷಾದನೀಯ. ಈ ತಿದ್ದುಪಡಿಗಳನ್ನು ಕೂಡಲೇ ಅನುಷ್ಠಾನಗೊಳಿಸಿ ಮಾರುಕಟ್ಟೆಗಳಲ್ಲಿ ರೈತರಿಗಾಗುತ್ತಿರುವ ಶೋಷಣೆಯನ್ನು ನಿಲ್ಲಿಸಬೇಕೆಂದು ಈ ಸಭೆಯು ಒತ್ತಾಯಿಸುತ್ತದೆ.

6. ಕರ್ನಾಟಕ ರಾಜ್ಯದಲ್ಲಿ ಈಗ ರೈತ ಬೆಳೆಯುವ ವಿವಿಧ ಬೆಳೆಗಳ ಉತ್ಪಾದನಾ ವೆಚ್ಚವನ್ನು ರೈತರೇ ಲೆಕ್ಕಹಾಕಿ ಅದನ್ನು ಕೇಂದ್ರ ಸರ್ಕಾರದ ಸಂಬಂಧಿಸಿದ ಸಚಿವರು ಹಾಗೂ ಪ್ರಧಾನ ಮಂತ್ರಿಗಳ ಗಮನಕ್ಕೆ ತಂದು ಯೋಗ್ಯ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಗೊಳಿಸಲು ತೀವ್ರ ಕ್ರಮ ಕೈಗೊಳ್ಳಬೇಕೆಂದು ಈ ಸಭೆಯು ಒತ್ತಾಯಿಸುತ್ತದೆ.

7. ಕೇಂದ್ರ ಹಾಗೂ ರಾಜ್ಯದ ಮುಂಗಡ ಪತ್ರಗಳಲ್ಲಿ ಕೃಷಿಕರ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಇಲಾಖೆಗಳಿಗೆ ಹಣಕಾಸು ಹಂಚಿಕೆ ಮಾಡಬೇಕೆಂದು ಈ ಸಭೆ ಒತ್ತಾಯಿಸುತ್ತದೆ.

| (ಚಂಗಲ್ ರೆಡ್ಡಿ) | (ಡಿ.ಆರ್. ಪಾಟೀಲ) | (ಬಸವರಾಜ ಇಂಗಿನ) |
|---|---|---|
| ಮಹಾಪ್ರಧಾನ ಕಾರ್ಯದರ್ಶಿ | ಕಾರ್ಯಕಾರಿ ಸಮಿತಿ | ಕಾರ್ಯಕಾರಿ ಸಮಿತಿ |
| ಸೀಫಾ | ಸದಸ್ಯರು, ಸೀಫಾ | ಸದಸ್ಯರು, ಸೀಫಾ |